**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 7

ಚಾ.ಸಾ. 12

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 27.10.2025**

| | |
|---|---|
| ಸಾಕ್ಷಿದಾರರ ಹೆಸರು | ದೀಪಕ್ |
| ತಂದೆಯ ಹೆಸರು | ದೇವರಾಜು.ಟಿ.ಕೆ. |
| ವಯಸ್ಸು | 37 ವರ್ಷ |
| ಉದ್ಯೋಗ | ವ್ಯವಸಾಯ ಮತ್ತು ಎಳನೀರು ವ್ಯಾಪಾರ |
| ವಾಸ | ತೊಪ್ಪನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ನನ್ನ ಸ್ವಂತ ಊರು ತೊಪ್ಪನಹಳ್ಳಿ. ನಾನು ಈಗ 5-6 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇದ್ದೇನೆ. ಚಾಸಾ.4, ಚಾಸಾ.5, ಚಾಸಾ.10 ನನ್ನ ಸಹೋದರರು. ಚಾಸಾ.1 ರಿಂದ 3, 6 ರಿಂದ 9, 11, 13 ರಿಂದ 15 ನಮ್ಮ ಊರಿನವರು. ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರು ಆಗಿರುವ ಆರೋಪಿಗಳು ನಮ್ಮ ಊರಿನವರು. ನಮ್ಮ ಮತ್ತು ಆರೋಪಿಗಳ ಸಂಬಂಧ ಚೆನ್ನಾಗಿಲ್ಲ. ಸುಮಾರು 25 ವರ್ಷಗಳಿಂದ ನಮ್ಮಲ್ಲಿ ಮಾತುಕತೆ ಇಲ್ಲ. ರಾಜಕೀಯ ಹಿನ್ನೆಲೆಯಿಂದಾಗಿ ನಮ್ಮ ಸಂಬಂಧ ಚೆನ್ನಾಗಿಲ್ಲ.

2. ದಿನಾಂಕ 25.12.2016 ರಂದು ಸಂಜೆ 6.00 ರಿಂದ 6.30 ಗಂಟೆ ಸಮಯದಲ್ಲಿ ತೊಪ್ಪನಹಳ್ಳಿಯ ಅರಳೀಮರದ ಕಟ್ಟೆಯ ಬಳಿ ಜಗಳವಾಗುತ್ತಿತ್ತು. ಆಗ ನಾನು ನಮ್ಮ

ಮನೆಯ ಬಳಿ ಇದ್ದೆ. ನಮ್ಮ ಮನೆಯಿಂದ ಸದರಿ ಅರಳೀಮರದ ಕಟ್ಟೆ 150 ಅಡಿಯಿಂದ 250 ಅಡಿ ದೂರದಲ್ಲಿದೆ. ನಾನು ಗಲಾಟೆ ಕೇಚಿ ಮನೆಯಿಂದ ಹೊರಗಡೆ ಬಂದು ರಸ್ತೆಯ ಬಳಿ ಬಂದೆ. ನಾನು ನೋಡಿದಾಗ ಚಾಸಾ.3 ರವರು ಚಾಸಾ.1 ಮತ್ತು ಚಾಸಾ.2 ರವರನ್ನು ಒಂದು ಸ್ಕೂಟರಿನಲ್ಲಿ ಆಸ್ಪತ್ರೆ ಕಡೆಗೆ ಸದರಿ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ನಾನು ಕಂಡಾಗ ಚಾಸಾ.1 ರವರ ತಲೆಯಿಂದ ರಕ್ತ ಸುರಿಯುತ್ತಿತ್ತು. ಚಾಸಾ.2 ರವರ ಕೈಯಿಂದ ರಕ್ತ ಸುರಿಯುತ್ತಿತ್ತು. ಬಳಿಕ ನಾನು ಅರಳೀಮರದ ಬಳಿ ಹೋಗೋಣವೆಂದು ಮುಂದುವರೆದಾಗ, ಅರಳೀಮರದ ಕಡೆಯಿಂದ ಆರೋಪಿಗಳಾದ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ, ಉಮೇಶ, ಷಡ್ಡು ಅಲಿಯಾಸ್ ಮುತ್ತುರಾಜು, ಮಹದೇವು, ಕೆಂಗಲ್ ಗೌಡರು ಮತ್ತು ನ್ಯಾಯಾಲಯದ ಮುಂದೆ ಹಾಜರು ಇರುವ ಎಲ್ಲಾ ಆರೋಪಿಗಳು ಬರುತ್ತಿದ್ದರು. 1ನೇ ಆರೋಪಿ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ ಕೈಯಲ್ಲಿ ಮಚ್ಚು ಇತ್ತು. ಬಳಿಕ ನಾನು ಮನೆಯ ಒಳಗಡೆ ಹೋದೆ. ಸದರಿ ಗಲಾಟೆಯಲ್ಲಿ ನನಗೆ ಯಾವುದೇ ಗಾಯ ಆಗಿಲ್ಲ. ಹಿಂದಿನ ದಿನ ಆರೋಪಿಗಳು ಪ್ರಸನ್ನ ಎಂಬುವವರಿಗೆ ಹೊಡೆದು ಆ ಬಾಬ್ತು ಪ್ರಕರಣ ದಾಖಲು ಆಗಿತ್ತು. ಆರೋಪಿಗಳು ಕೆಟ್ಟ ಪದಗಳಿಂದ ಬೈಯುತ್ತಿದ್ದರು. ಏನು ಕೆಟ್ಟ ಪದ ಎಂದು ಈಗ ಹೇಳಲು ಆಗುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ವಿಶೇಷ ಅಭಿಯೋಜಕರವರಿಂದಃ**

*3.* ಘಟನೆ ನಡೆದ ದಿನ ಬೆಳಗ್ಗೆ ಆರೋಪಿಗಳು ಎಂಬುವವರಿಗೆ ಹೊಡೆದು ಪ್ರಸನ್ನ ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿ. ಪ್ರಸನ್ನ ನನ್ನ ಸಹೋದರ ಸಂಬಂಧಿ ಎಂದರೆ ಸರಿ. ನಾನು ನೋಡಿದಾಗ ಆರೋಪಿಗಳಲ್ಲಿ *1*ನೇ ಆರೋಪಿ "ಏನ್ರೋ ಬೋಳಿಮಕ್ಕಳಾ, ಊರಿನಲ್ಲಿ ನಿಮ್ಮನ್ನು ಸುಮ್ಮನೇ ಬಿಡುತ್ತೀವಿ ಅಂದುಕೊಂಡ್ರಾ, ನೋಡು ನಾವೆಲ್ಲಾ ನಿಮಗೆ ಏನು ಮಾಡುತ್ತೀವಿ" ಎಂದು ಬೈಯುತ್ತಿದ್ದರು ಎಂದರೆ ಸರಿ. ಅಲ್ಲದೇ *1*ನೇ ಆರೋಪಿ ಉಳಿದ

ಆರೋಪಿಗಳಿಗೆ "ಇವ್ರನ್ನ ಹೀಗೆ ಬಿಟ್ಟರೆ ನಮಗೆ ಉಳಿಗಾಲವಿಲ್ಲ ಬಿಡಬೇಡಿ ಈ ನನ್ನ ಮಕ್ಕಳನ್ನು ಸಾಯಿಸ್ರೋ, ಇವರ ಕುಟುಂಬನಾ ಸರ್ವ ನಾಶ ಮಾಡಿಬಿಡೋಣ" ಎಂದು ಉಳಿದ ಆರೋಪಿಗಳಿಗೆ ಕುಮ್ಮಕ್ಕು ಕೊಡುತ್ತಿದ್ದರು ಎಂದರೆ ಸರಿ. ಬಳಿಕ ಎಲ್ಲಾ ಆರೋಪಿಗಳು ಸೇರಿ ನನ್ನ ಅಣ್ಣ ತಮ್ಮಂದಿರಿಗೆ ದೊಣ್ಣೆಗಳಿಂದ ಹೊಡೆದರು ಎಂದರೆ ಸರಿ. ಬಳಿಕ *12* ನೇ ಆರೋಪಿ ಮುತ್ತುರಾಜು ನನ್ನ ಕೈ ಕಾಲುಗಳಿಗೆ ದೊಣ್ಣೆಯಿಂದ ಹೊಡೆದ ಎಂದರೆ ಯಾರೋ ಹೊಡೆದರು ಯಾರು ಎಂದು ಗೊತ್ತಾಗಲಿಲ್ಲ. ನಾನು ಮನೆಯ ಒಳಗೆ ಹೋಗುವುದನ್ನು ನೋಡಿದ ಆರೋಪಿಗಳು ಹೊರಗಡೆಯಿಂದ ನಮ್ಮ ಮನೆಯ ಬಾಗಿಲಿಗೆ ಗುದ್ದಿ ಮನೆಯ ಕಿಟಕಿಯ ಗಾಜಿಗೆ ಕಲ್ಲಿನಿಂದ ಒಡೆದು ಹಾಕಿದರು ಎಂದರೆ ಸರಿ. ಅವರು ಮನೆಯ ಕಿಟಕಿ ಗಾಜು ಒಡೆದು ಹಾಕಿದ್ದರಿಂದ ನನಗೆ ಸುಮಾರು ರೂ.*2,500/-* ನಷ್ಟ ಉಂಟಾಗಿದೆ.

**<u>ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ಎಸ್ ಹೆಚ್ ಎಸ್ ವಕೀಲರಿಂದಃ</u>**

1. ಎಸ್ ಸಿ ಸಂಖ್ಯೆ 82/2017 ರಲ್ಲಿ ನಾನು ಆರೋಪಿ ಎಂದರೆ ಸರಿ. ಚಾಸಾ.1 ಮುತ್ತುರಾಜು ಕೂಡ ಸದರಿ ಪ್ರಕರಣದಲ್ಲಿ 1 ನೇ ಆರೋಪಿ ಎಂದರೆ ಸರಿ. ಚಾಸಾ.4, ಚಾಸಾ.5 ಮತ್ತು ಚಾಸಾ.10 ರವರೂ ಕೂಡ ಸದರಿ ಪ್ರಕರಣದಲ್ಲಿ ಆರೋಪಿಗಳು ಎಂದರೆ ಸರಿ. ಆ ಪ್ರಕರಣದಲ್ಲಿ ನಂದೀಶ ಮತ್ತು ಮುತ್ತುರಾಜು ಎಂಬುವವರು ಕೊಲೆಯಾಗಿದ್ದಾರೆಂದರೆ ಸರಿ. ಆ ಪ್ರಕರಣದಲ್ಲಿ ನಾನು ಆರೋಪಿಯಾಗಿದ್ದು, ಅದರಿಂದ ತಪ್ಪಿಸಕೊಳ್ಳಲು ನಾನು ಈ ಪ್ರಕರಣದಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ "ನಾನು ನಮ್ಮ ಮನೆಯ ಬಳಿ ಇದ್ದೆ. ನಮ್ಮ ಮನೆಯಿಂದ ಸದರಿ ಅರಳೀಮರದ ಕಟ್ಟೆ 150 ಅಡಿಯಿಂದ 250 ಅಡಿ ದೂರದಲ್ಲಿದೆ. ನಾನು ಗಲಾಟೆ ಕೇಚಿ ಮನೆಯಿಂದ ಹೊರಗಡೆ ಬಂದು ರಸ್ತೆಯ ಬಳಿ ಬಂದೆ. ನಾನು ನೋಡಿದಾಗ ಚಾಸಾ.3 ರವರು ಚಾಸಾ.1 ಮತ್ತು ಚಾಸಾ.2 ರವರನ್ನು ಒಂದು ಸ್ಕೂಟರಿನಲ್ಲಿ ಆಸ್ಪತ್ರೆ ಕಡೆಗೆ ಸದರಿ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು" ಎಂಬ ಅಂಶವನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಆ ರೀತಿ ಯಾವುದೇ ಹೇಳಿಕೆ ನೀಡಿಲ್ಲ ಈಗ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ.3 ರವರು ಚಾಸಾ.1 ಮತ್ತು ಚಾಸಾ.2 ರವರನ್ನು ಕರೆದುಕೊಂಡು ಹೋಗುತ್ತಿದ್ದ ಸ್ಕೂಟರ್ ಸಂಖ್ಯೆ ಗೊತ್ತಿಲ್ಲ, ಅದು ಒಂದು ಪಲ್ಸರ್ ಬೈಕ್. ಬೈಕಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಸಮಯ ಸಂಜೆ 6.00 ರಿಂದ 6.30 ಗಂಟೆ ಆಗಿತ್ತು. ಅವರು ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ನಾನು ನೋಡಿದ್ದೇನೆ, ನಮ್ಮ ಮನೆಯ ಮುಂದೆ ಸದರಿ ರಸ್ತೆ ಇದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ "ನಾನು ಕಂಡಾಗ ಚಾಸಾ.1 ರವರ ತಲೆಯಿಂದ ರಕ್ತ ಸುರಿಯುತ್ತಿತ್ತು. ಚಾಸಾ.2 ರವರ ಕೈಯಿಂದ ರಕ್ತ ಸುರಿಯುತ್ತಿತ್ತು. ಬಳಿಕ ನಾನು

ಅರಳೀಮರದ ಬಳಿ ಹೋಗೋಣವೆಂದು ಮುಂದುವರೆದಾಗ, ಅರಳೀಮರದ ಕಡೆಯಿಂದ ಆರೋಪಿಗಳಾದ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ, ಉಮೇಶ, ಷಡ್ಡು ಅಲಿಯಾಸ್ ಮುತ್ತುರಾಜು, ಮಹದೇವು, ಕೆಂಗಲ್ ಗೌಡರು ಮತ್ತು ನ್ಯಾಯಾಲಯದ ಮುಂದೆ ಹಾಜರು ಇರುವ ಎಲ್ಲಾ ಆರೋಪಿಗಳು ಬರುತ್ತಿದ್ದರು. 1 ನೇ ಆರೋಪಿ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ ಕೈಯಲ್ಲಿ ಮಚ್ಚು ಇತ್ತು" ಎಂಬ ಅಂಶವನ್ನು ನನ್ನ ಹೇಳಿಕೆಯಲ್ಲಿ ನಾನು ಸಿ ಐ ಡಿ ಪೊಲೀಸರ ಮುಂದೆ ಹೇಳಿದ್ದೇನೆ. ನಾನು ಸಿ ಐ ಡಿ ಪೊಲೀಸರ ಮುಂದೆ ಆ ರೀತಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲೆ ಇರುವ ಪ್ರಕರಣದಲ್ಲಿ ನಮಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯ ಕೈಯಲ್ಲಿ ಮಚ್ಚು ಇತ್ತು ಎಂದು ಸಿ ಐ ಡಿ ಪೊಲೀಸರ ಮುಂದೆ ಹೇಳಿದ್ದೇನೆ. ಆ ರೀತಿ ನಾನು ಸಿ ಐ ಡಿ ಪೊಲೀಸರ ಮುಂದೆ ಹೇಳಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವ ಆರೋಪಿಗಳ ಮೇಲೆ ಪ್ರಸನ್ನ ರವರಿಗೆ ಹೊಡೆದ ಬಾಬ್ತು ಪ್ರಕರಣ ದಾಖಲು ಆಗಿತ್ತು ಎಂದು ಗೊತ್ತಿಲ್ಲ. ಎಸ್ ಸಿ ಸಂಖ್ಯೆ 82/2017 ರ ಆರೋಪಿಗಳು 1 ನೇ ಆರೋಪಿ ಮೇಲೆ ಹಲ್ಲೆ ಮಾಡಿದ್ದರಿಂದ ಅವರು 15 ದಿವಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಅವರು ಚಿಕಿತ್ಸೆ ಪಡೆದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ "ಏನ್ರೋ ಬೋಳಿಮಕ್ಕಳಾ, ಊರಿನಲ್ಲಿ ನಿಮ್ಮನ್ನು ಸುಮ್ಮನೇ ಬಿಡುತ್ತೀವಿ ಅಂದುಕೊಂಡ್ರಾ, ನೋಡು ನಾವೆಲ್ಲಾ ನಿಮಗೆ ಏನು ಮಾಡುತ್ತೀವಿ" ಎಂದು ಬೈಯುತ್ತಿದ್ದರು ಎಂದರೆ ಸರಿ. ಅಲ್ಲದೇ 1 ನೇ ಆರೋಪಿ ಉಳಿದ ಆರೋಪಿಗಳಿಗೆ "ಇವ್ರನ್ನ ಹೀಗೆ ಬಿಟ್ಟರೆ ನಮಗೆ ಉಳಿಗಾಲವಿಲ್ಲ ಬಿಡಬೇಡಿ ಈ ನನ್ನ ಮಕ್ಕಳನ್ನು ಸಾಯಿಸ್ರೋ, ಇವರ ಕುಟುಂಬನಾ ಸರ್ವ ನಾಶ ಮಾಡಿಬಿಡೋಣ" ಎಂದು ಉಳಿದ ಆರೋಪಿಗಳಿಗೆ ಕುಮ್ಮಕ್ಕು ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮನೆಯ ಕಿಟಕಿ ಬಾಗಿಲು ಒಡೆದು ಹಾಕಿದ ಬಾಬ್ತು ನಾನು ಪ್ರತ್ಯೇಕ ದೂರು ನೀಡಿಲ್ಲ. ಆರೋಪಿಗಳು ನಮ್ಮ ಮನೆಯ ಕಿಟಕಿ ಗಾಜುಗಳನ್ನು ಒಡೆದು ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯ ಗಾಜು ಒಡೆದು ರೂ.2500/- ನಷ್ಟ ಉಂಟಾದ ಬಾಬ್ತು ನಾನು ಯಾವುದೇ ದಾಖಲೆಯನ್ನು ತನಿಖಾಧಿಕಾರಿಗೆ ನೀಡಿಲ್ಲ. ನನಗೆ ಆ ರೀತಿ ಯಾವುದೇ ನಷ್ಟ ಉಂಟು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲೆ ಇರುವ ಕೊಲೆ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಾನು ಈ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *5, 7* ರಿಂದ *14* ನೇ ಆರೋಪಿತರ ಪರ ಶ್ರೀ ಹೆಚ್ ಎಂ ಎಲ್**

**ವಕೀಲರಿಂದಃ**

*1.* ಆರೋಪಿಗಳು ಅರಳೀಕಟ್ಟೆಯ ಮೇಲೆ ಕುಳಿತಿದ್ದಾಗ ನಾನು ಏಕಾಏಕಿ ಅಲ್ಲಿಗೆ ಹೋಗಿ ಅವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದೇನೆಂದು ನನ್ನ ಮೇಲೆ ಪ್ರಕರಣ ದಾಖಲು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಎಸ್ ಸಿ ಸಂಖ್ಯೆ *82/2017* ರಲ್ಲಿ ನಾನು ಆರೋಪಿಯಾಗಿದ್ದು, ಆ ಪ್ರಕರಣದಲ್ಲಿ ಈ ಪ್ರಕರಣದ *1* ರಿಂದ *14* ನೇ ಆರೋಪಿಗಳು ಸಾಕ್ಷಿದಾರರು ಎಂದರೆ ಸರಿ. ಎಸ್ ಸಿ ನಂ.*82/2017*ರ ಪಿರ್ಯಾದುದಾರಿಗೆ ನಾನು ಚಾಕುವಿನಿಂದ ಚುಚ್ಚಿದ್ದ ಬಾಬ್ತು ಸದರಿ ಪ್ರಕರಣ ದಾಖಲು ಆಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದ *4* ಮತ್ತು *6* ನೇ ಆರೋಪಿಗಳ ಸಾವಿಗೆ ನಾನೇ ಕಾರಣ ಎಂದರೆ ಸರಿಯಲ್ಲ. ಆ ಪ್ರಕರದಿಂದ ತಪ್ಪಿಸಿಕೊಳ್ಳಲು ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.